**ಸಾಕ್ಷಿಯನ್ನು ದಿಃ 27.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಫಾರಂ ಎ ಅಸೆಸ್ಮೆಂಟ್ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 16 ಎಂದು, ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ.17 ಎಂದು, ಎರಡು ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.18 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಗಾಯಾಳು ನಮ್ಮ ಆಸ್ಪತ್ರೆಗೆ ಬರುವ ಮೊದಲು ಕೆ.ಆರ್. ಆಸ್ಪತ್ರೆಗೆ ಹೋಗಿರುತ್ತಾರೆ. ಕೆ.ಆರ್ ಆಸ್ಪತ್ರೆಯಿಂದ ನಮ್ಮ ಆಸ್ಪತ್ರೆಗೆ ಶಿಫಾರಸ್ಸು ಬಂದಿರುವುದಿಲ್ಲ. ದಿಃ 24.03.2023 ರಂದು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ದಿಃ 23.03.2023 ರಂದು ಕೆ.ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಕೆ.ಆರ್. ಆಸ್ಪತ್ರೆಯ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಮ್ಮ ಆಸ್ಪತ್ರೆಗೆ ಬಂದಾಗ ಸಿ.ಎಂ.ಓ ರವರು ನೋಡಿರುತ್ತಾರೆ. ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ಹಿನ್ನಲೆಯನ್ನು ಗಾಯಾಳು ಅಥವಾ ಗಾಯಾಳುವಿನ ಕಡೆಯವರು ಹೇಳಿದ ಮೇರೆಗೆ ಬರೆದುಕೊಂಡಿರುತ್ತೇವೆ. ಗಾಯಾಳುವಿಗೆ ಕ್ಲಾವಿಕಲ್ ಫ್ರಾಕ್ಚರ್ ಮತ್ತು ಬಲಗೈ ಗೆ ಗಾಯ ಆಗಿರುತ್ತದೆ. ನಮ್ಮ ಆಸ್ಪತ್ರೆಯಲ್ಲಿ ಗಾಯಾಳು ಒಟ್ಟು 40 ದಿನ ದಾಖಲಾಗಿದ್ದರು. ನಿಪಿ. 14 ನಮ್ಮ ಆಸ್ಪತ್ರೆಯ ಡಿಸ್ ಚಾರ್ಜ್ ಸಮ್ಮರಿ ಎಂದರೆ ಸರಿ. ಎರಡನೇ ಬಾರಿಯ ಡಿಸ್ ಚಾರ್ಜ್ ಸಮ್ಮರಿಯಲ್ಲಿ ಸೆಲ್ಫ್ ಫಾಲ್ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಗಾಯಾಳು ಎರಡನೇ ಬಾರಿ ಆಸ್ಪತ್ರೆಗೆ ದಾಖಲಾಗಿದ್ದು ಅಪಘಾತ ಗಾಯಗಳಿಗೆ ಚಿಕಿತ್ಸೆ ಪಡೆಯಲು ಅಲ್ಲ

ಎಂದರೆ ಸಾಕ್ಷಿಯು ತಲೆಗೆ ಆದ ಗಾಯಗಳ ಪರಿಣಾಮದಿಂದ ಬಿದ್ದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಎರಡನೇ ಬಾರಿಯ ಡಿಸ್ ಚಾರ್ಜ್ ಸಮ್ಮರಿಯ ಪ್ರಕಾರ ಆರ್.ಟಿ.ಎ ಅಲ್ಲ ಎಂದರೆ ಸರಿ.

ನಾನು ಮೆಡಿಕಲ್ ಬೋರ್ಡ್‌ನ ಸದಸ್ಯನಾಗಿರುವುದಿಲ್ಲ. ಮೆಡಿಕಲ್ ಬೋರ್ಡ್‌ನವರು ನನಗೆ ನ್ಯೂನತೆ ಪರಿಗಣಿಸಲು ಅಧಿಕಾರ ನೀಡಿರುವುದಿಲ್ಲ. ನಾನು ನೀಡಿರುವುದು ನ್ಯೂನತಾ ಪ್ರಮಾಣ ಪತ್ರ ಅಲ್ಲ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಹ್ಯಾಂಡ್ ಕಾಂಪೋನೆಂಟ್ ಮತ್ತು ರಿಸ್ಟ್ ಕಾಂಪೊನೆಂಟ್ ಗೆ ಬೇರೆ ಬೇರೆ ನ್ಯೂನತೆ ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಗಾಯಾಳು ಮೊದಲನೆ ಬಾರಿ ದಿಃ 30.04.2023 ರಂದು ಬಿಡುಗಡೆಯಾಗಿರುತ್ತಾರೆ. 2 ನೇ ಬಾರಿ ದಿಃ 10.05.2023 ರಂದು ಬಿಡುಗಡೆಯಾಗಿರುತ್ತಾರೆ. ಇದರ ಮಧ್ಯದ ಅವಧಿಯಲ್ಲಿ ಸಾಕಷ್ಟು ಬಾರಿ ಮುಂದುವರೆದ ಚಿಕಿತ್ಸೆಗೆ ಬಂದಿರುತ್ತಾರೆ ದಾಖಲೆಗಳು ಗಾಯಾಳು ಬಳಿ ಇದೆ ಎಂದು ಉತ್ತರಿಸಿರುತ್ತಾರೆ. ಮುಂದುವರೆದ ಚಿಕಿತ್ಸೆಗೆ ಗಾಯಾಳು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ 10 ಕೆ.ಜಿ ಗಿಂತ ಹೆಚ್ಚು ಭಾರ ಎತ್ತಲು ಆಗುವುದಿಲ್ಲ ಮತ್ತು ಆರ್.ಓ.ಎಂ ನಲ್ಲಿ ಕೊರತೆ ಇದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ್ದು ನಿಪಿ. 17 ಹೊರತು ಪಡಿಸಿ ಬೇರೆ ದಾಖಲೆಗಳಲ್ಲಿ ಇಲ್ಲ ಎಂದರೆ ಸರಿ. ಹಾಗಾಗಿ ಪ್ರಮಾಣ ಪತ್ರದಲ್ಲಿ ಹೇಳಿರುವ ತೊಂದರೆಗಳು ಸುಳ್ಳು ಎಂದರೆ ಸರಿಯಲ್ಲ. ಉಪಕರಣಗಳನ್ನು ತೆಗೆದಿರುತ್ತೇನೆ. 2024 ರ ಗೈಡ್ ಲೈನ್ ಪ್ರಕಾರ ನ್ಯೂನತೆ ಪರಿಗಣಿಸಿರುತ್ತೇನೆ. ಸದರಿ ಗೈಡ್ ಲೈನ್ ಅನ್ನು ಹಾಜರು ಪಡಿಸಿರುವುದಿಲ್ಲ. ಫಾರಂ ಎ ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳು ನ್ಯೂನತೆ ಪರಿಗಣಿಸಿಕೊಳ್ಳಲು ಮೆಡಿಕಲ್ ಬೋರ್ಡ್‌ಗೆ ಹೋಗಬಹುದಿತ್ತು ಎಂದರೆ ಸರಿ. ನಾನು ಹೆಚ್ಚಿನ ನ್ಯೂನತೆ ನೀಡುತ್ತೇನೆ ಎಂದು ನನ್ನ ಬಳಿ ನ್ಯೂನತೆ ಪರಿಗಣಿಸಿಕೊಂಡಿರುತ್ತಾರೆ ಎಂದರೆ

ಸರಿಯಲ್ಲ. ಗಾಯಾಳುವಿಗೆ ಯಾವುದೇ ನ್ಯೂನತೆ ಇಲ್ಲದಿದ್ದರೂ ಅವರಿಗೆ ಸಹಾಯ ಆಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.